ಓ.ಎಸ್. 102/2018 ಪಿ.ಡಬ್ಲ್ಯೂಃ 1

ದಿನಾಂಕಃ 14.07.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರಿದ ಪಾಟೀಸವಾಲುಃಪ್ರತಿವಾದಿಪರ ವಕೀಲರಾದ ಶ್ರೀ ಅವರಿಂದ – ಮಧ್ಯಂತರ ಅರ್ಜಿ 4 ಹಾಗೂ 5 ರ ಆದೇಶದ ಮೇರೆಗೆ ಸಾಕ್ಷಿದಾರರನ್ನು ಪುನಃ ವಿಚಾರಣೆಗೆ ಒಳಪಡಿಸಲಾಯಿತು.**

**1.** ಈ ದಾವೆಯಲ್ಲಿ **7** ನೇ ಪ್ರತಿವಾದಿ ದಿವ್ಯಾ ಇನಫ್ರಟೆಕ್ ಪ್ರೈವೇಟ್ ಲಿ. ಅವರನ್ನು ಏಕೆ ಪಕ್ಷಗಾರರನ್ನಾಗಿ ಮಾಡಿರುವುದು ಎಂದರೆ ನಮ್ಮ ಜಮೀನು ಅವರ ಹೆಸರಿನಲ್ಲಿ ಇದೆ, ಆದುದರಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ನಮ್ಮ ಜಮೀನು ಅವರ ಹೆಸರಿನಲ್ಲಿದೆ ಎಂದು ತೋರಿಸಲು ಆರ್.ಟಿ.ಸಿ ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿರುವ ದಾಖಲಾತಿಗಳಲ್ಲಿ **7** ನೇ ಪ್ರತಿವಾದಿ ಹೆಸರು ನಮೂದಾಗಿರುವುದಿಲ್ಲ ಎಂದರೆ ಸಾಕ್ಷಿ ಸ್ವಲ್ಪ ಹೊತ್ತು ಸುಮ್ಮನೆ ನಿಂತುಕೊಂಡು ಅಲಿನೇಷನ್ ನಲ್ಲಿ ಇದೆ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ದಾಖಲಾತಿ ನೋಡಿಲ್ಲ. ಅಲಿನೇಷನ್ ಆಗಿದೆ ಎಂಬುದರ ಬಗ್ಗೆ ನಾನು ದಾವೆ ಸಲ್ಲಿಸುವುದರ ಮೊದಲು ಖಾತ್ರಿ ಪಡಿಸಿಕೊಂಡಿಲ್ಲ ಎಂದರೆ **2018** ರಲ್ಲಿ ಗೊತ್ತಾಯಿತು ಎಂದು ಸಾಕ್ಷಿ ನುಡಿಯುತ್ತಾರೆ.

**2.** ಪ್ರಸ್ತುತ ದಾವ ಸ್ವತ್ತು ವ್ಯವಸಾಯದ ಭೂಮಿ ಆಗಿರುತ್ತದೆ. ಸದರಿ ವ್ಯವಸಾಯದ ಭೂಮಿ ದಾವೆ ಸಲ್ಲಿಸುವ ಸಮಯದಲ್ಲಿ ನಮ್ಮ ತಾತ ಮುದಿ ನಂಜೇಗೌಡ ಅವರ ಹೆಸರಿನಲ್ಲಿತ್ತು. ದಾವೆಸಲ್ಲಿಸುವ ಸಮಯದಲ್ಲಿ ಮುದಿ ನಂಜೇಗೌಡ ಅವರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸಾಕ್ಷಿ ಸುಮ್ಮನೆ ನಿಂತುಕೊಂಡಿರುತ್ತಾರೆ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ 2017-18 ರಲ್ಲಿ ಅಂದರೆ ದಾವೆ ಸಲ್ಲಿಸುವ ಸಮಯದಲ್ಲಿ ಟಿ ನಾರಾಯಣ ಸ್ವಾಮಿ ಹಾಗೂ 2 ರಿಂದ 6 ನೇ ಪ್ರತಿವಾದಿ ಅವರ ಹೆಸರಿನಲ್ಲಿತ್ತು ಎಂದರೆ ಸರಿ.

**3.** ದಾವೆ ಸಲ್ಲಿಸುವ ಸಮಯದಲ್ಲಿ ನಾನು ನಾರಾಯಣ ಸ್ವಾಮಿ ಅವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸರಿ. ನಾರಾಯಣ ಸ್ವಾಮಿ ಅವರ ಹೆಸರಿನಲ್ಲಿ ಯಾವಾಗ ಖಾತೆ ಆಗಿರುತ್ತದೆ ನನಗೆ ಗೊತ್ತಿಲ್ಲ. ಅದೇ ರೀತಿ 2 ರಿಂದ 6 ನೇ ಪ್ರತಿವಾದಿ ಅವರ ಹೆಸರಿನಲ್ಲಿ ಯಾವಾಗ ಖಾತೆ ಆಗಿರುತ್ತದೆ ತಿಳಿದುಕೊಂಡಿರುವುದಿಲ್ಲ.

4. ನಾನು 2 ರಿಂದ 6 ನೇ ಪ್ರತಿವಾದಿ ಅವರ ಹೆಸರಿನಲ್ಲಿ ಕ್ರಯ ಪತ್ರ ಆಗಿರುವುದಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ಸದರಿ ದಾಖಲಾತಿಗಳನ್ನು ಹಾಜರುಪಡಿಸಿದ್ದರು ಕೂಡ 2 ರಿಂದ 6 ನೇ ಪ್ರತಿವಾದಿ ಅವರ ಹೆಸರಿನಲ್ಲಿ ಯಾವಾಗ ಖಾತೆ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. 2 ರಿಂದ 6 ನೇ ಪ್ರತಿವಾದಿ ಅವರಿಗೆ ಜಮೀನು ಹೇಗೆ ಬಂದಿರುತ್ತದೆ ನಾನು ತಿಳಿದುಕೊಂಡಿರುವುದಿಲ್ಲ. ದಿಃ 24.03.1980 ರಲ್ಲಿ ನಾರಾಯಣ ಸ್ವಾಮಿ ಹಾಗೂ ಟಿ. ಕೃಷ್ಣ ಅವರಿಂದ 2 ರಿಂದ 6 ನೇ ಪ್ರತಿವಾದಿಯರು ದಾವಾ ಜಮೀನು ಖರೀದಿ ಮಾಡಿರುತ್ತಾರೆ ಎಂದರೆ ಸುಳ್ಳು.

6. 7 ನೇ ಪ್ರತಿವಾದಿ ಅವರು 2 ರಿಂದ 6 ನೇ ಪ್ರತಿವಾದಿರಿಂದ 17.05.2013 ರಂದು ಖರೀದಿ ಮಾಡಿರುತ್ತಾರೆ ಎಂದರೆ ಅವರು ಸುಳ್ಳು ಕ್ರಯಪತ್ರ ಮಾಡಿಕೊಂಡಿರುತ್ತಾರೆ . ಸದರಿ ಕ್ರಯಪತ್ರವನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಅದೇ ರೀತಿ ನಾನು ನಾರಾಯಣ ಸ್ವಾಮಿ ಅವರಿಂದ 2 ರಿಂದ 6 ನೇ ಪ್ರತಿವಾದಿಗಳು ದಾವಾ ಸ್ವತ್ತು ಖರೀದಿ ಮಾಡಿರುವ ಕ್ರಯಪತ್ರವನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ.

7. ಸದರಿ ಕ್ರಯಪತ್ರಗಳು 1980 ರಲ್ಲಿ ಆಗಿದ್ದು ಈ ದಾವಾ ಸಲ್ಲಿಸುವ ಮೊದಲು ನಾನು ಸದರಿ ಕ್ರಯಪತ್ರಗಳ ಸಿಂಧುತ್ವದ ಬಗ್ಗೆ ನಾನು ಪ್ರಶ್ನೆ ಮಾಡಿರುವುದಿಲ್ಲ. ಸದರಿ ಖಾತೆ ಬಗ್ಗೆ ನಾನು ಕಂದಾಯ ಇಲಾಖೆಯಲ್ಲಿ ನಾನು ಪ್ರಶ್ನೆ ಮಾಡಿರುವುದಿಲ್ಲ..ನಾನು ದಾವಾ ಸ್ವತ್ತಿನ ಸ್ವಾಧೀನ ಹೊಂದಿರುತ್ತೇನೆ ಎಂದು ತೋರಿಸಲು ಫೋಟೋಗಳನ್ನು ಹಾಜರುಪಡಿಸಿರುತ್ತೇನೆ. ಫೋಟೋಗಳನ್ನು ಹೊರತು ಪಡಿಸಿ ನಾನು ದಾವಾ ಸ್ವತ್ತಿನ ಸ್ವಾಧೀನ ಹೊಂದಿರುತ್ತೇನೆ ಎಂದು ತೋರಿಸಲು ಯಾವುದೇ ಕಂದಾಯ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

8. ನಾನು ಚಿಕ್ಕಾಡನಹಳ್ಳಿಯಲ್ಲಿ ವಾಸವಾಗಿರುತ್ತೇನೆ. ವಾದಿಗಳೆಲ್ಲರೂ ಕೂಡ ಚಿಕ್ಕಾಡನಹಳ್ಳಿಯಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. ನಾಹಿವು ಒಟ್ಟು 17 ಜನ ವಾದಿಗಳು ಇದ್ದು ಎಲ್ಲರಿಗೂ ಮನೆ ಹಾಗೂ ನಿವೇಶನಗಳು ಇವೆ ಎಂದರೆ ಸರಿ. ಸದರಿ 17 ಜನರಿಗೆ ದಾವಾ ಸ್ವತ್ತು ಹೊರತುಪಡಿಸಿ ಬೇರೆ ಜಮೀನುಗಳು ಇಲ್ಲ. ಮನೆ ಹಾಗೂ ನಿವೇಶನಗಳನ್ನು ನಾನು ಪ್ರಸ್ತುತ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಅವುಗಳನ್ನು ಸೇರಿಸಲು ತೊಂದರೆ ಇಲ್ಲ.

9. ಪ್ರತಿವಾದಿಯರ ಹೆಸರಿನಲ್ಲಿರುವ ಖಾತೆಯನ್ನು ಕಂದಾಯ ಇಲಾಖೆಯಲ್ಲಿ ಪ್ರಶ್ನೆ ಮಾಡಲು ತೊಂದರೆ ಇರಲಿಲ್ಲ. ನಮ್ಮ ಊರಿನಲ್ಲಿ ಸದರಿ ಭಾಗದ ಬಗ್ಗೆ ನ್ಯಾಯಾ ಪಂಚಾಯತಿ ಮಾಡಿರುತ್ತಾರೆ. 2018 ರಲ್ಲಿ ನ್ಯಾಯಾ ಪಂಚಾಯತಿ ಆಗಿರುತ್ತದೆ. 17 ವಾದಿಗಳು ನ್ಯಾಯಾ ಪಂಚಾಯತಿಗೆ ಸೇರಿಲ್ಲ ನಾನು ಸದರಿಯವರನ್ನು ಪ್ರಚೋದಿಸಿ ವಾದಪತ್ರ ಹಾಗೂ ವಕಾಲತ್ ಗೆ ಸಹಿ ಪಡೆದು ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

10. ದಾವೆ ಸಲ್ಲಿಸುವ ಸಮಯದಲ್ಲಿ ದಾವಾ ಸ್ವತ್ತು ವ್ಯವಸಾಯ ಜಮೀನು ಅಗಿರದೆ ನಿವೇಶನಗಳಾಗಿ ಪರಿವರ್ತನೆ ಆಗಿರುತ್ತವೆ ಎಂದರೆ ಸರಿಯಲ್ಲ. ನಾನು ಗ್ರಾಮದಲ್ಲಿ

ಗೂಂಡಗಳನ್ನು ಸೇರಿಸಿ ಪ್ರತಿವಾದಿಯರ ಆಸ್ತಿ ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

11. ನ್ಯಾಯಾಲಯದ ಮುಂದೆ ದಾವಾ ಜಮೀನು ಸೈಟುಗಳಾಗಿರುತ್ತವೆ ಎಂದು ತಿಳಿಸಿದರೆ ಹೆಚ್ಚಿನ ಫಿ ಕಟ್ಟಬೇಕಾಗುತ್ತದೆ ಎಂಬ ಉದ್ದೇಶದಿಂದ ಅದು ವ್ಯವಸಾಯ ಜಮೀನು ಎಂದು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾರಾಯಣ ಸ್ವಾಮಿ ಅಂದರೆ ದಾವಾ ಸ್ವತ್ತಿನ ಮೂಲ ಕ್ರಯದಾರ ಇವರಿಗೆ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡದೆ ಇರುವುದರಿಂದ ಈ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಕುಟುಂಬದ ಇತರೆ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸದೆ ಇರುವುದರಿಂದ ಈ ದಾವೆ ಊರ್ಜಿತವಲ್ಲ ಎಂದರೆ ಆಸ್ತಿಗಳು ಇಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

**12.** ದಾವಾ ಸ್ವತ್ತನ್ನು **40** ವರ್ಷಗಳ ಹಿಂದೆ ಬೇರೆಯವರಿಗೆ ಮಾರಾಟ ಮಾಡಿರುದರಿಂದ ಈ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ಆಸ್ತಿ ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ, ಹುಣಸೂರು.